Electrical Department (Amount involved in sanctioning demands of Employees).

Q.—624. Sri K. PRABHAKAR (Nelamangala—Scheduled Castes).—

Will the Government be pleased to state :—

(*a*) what is the extra cost to Government if the proposals made by the Committee regarding the demands of the employees of the Electrical Department are accepted ;

(*b*) how many persons were sent out of employment during and after their strike ?

A.—Sri H. M. CHANNABASAPPA (Minister for Industries).—

(*a*) Rs. 2,07,440.

(*b*) None.

BUDGET FOR 1956-57—DEMANDS FOR GRANTS.

Mr. SPEAKER.— Now the discussion on Demands for Grants will be resumed. We have got 4 Demands. Taking into consideration that the House will sit till 6 P.M. I have allotted time like this :—

Demand Nos. 4 and 36...	1½ hours.
Demand No. 33 ...	15 minutes.
Demand No. 35A ...	45 minutes.

DEMAND NO. 4—FOREST.

10. FOREST.

Mr. SPEAKER.—Motion moved :

"That a sum not exceeding Rs. 54,89,000 be granted to the Government to defray the charges which will come in course of payment during the year ending 31st day of March 1957, in respect of 'Forest'."

Discussion may take place on both the Demands, Nos. 4 and 36.

ಶ್ರೀ ಎಸ್. ಗೋಪಾಲಗೌಡ (ನಾಗರ—ಹೊಸನಗರ).—ಸ್ವಾಮಿ, ಫಾರೆಸ್ಟಿಗೆ ಸಂಬಂಧಪಟ್ಟ ಡಿಮ್ಯಾಂಡ್ ಮನವಿಯನ್ನು ನಾನು ವಿರೋಧಿಸುತ್ತಾ ಈ ಡಿಪಾರ್ಟ್‌ಮೆಂಟಿಗೆ ಸಂಬಂಧಪಟ್ಟ ಹಾಗೆ ಕೆಲವು ಅಂಶಗಳನ್ನು ಈ ಸಭೆಯ ಗಮನಕ್ಕೆ ತರಬೇಕೆಂದಿದ್ದೇನೆ. ಮುಖ್ಯವಾಗಿ ಮಲೆನಾಡಿನಲ್ಲಿ ಕಾಡುಗಳನ್ನು ಕಡಿಯುತ್ತಾ ಇರತಕ್ಕ ರೀತಿ ನೋಡಿದರೆ, ಆಗಲೇ ಅದು ಬಯಲು ಸೀಮೆಯಾಗಿದೆ. ಇಪ್ಪತ್ತು ಕೆಲವು ವರ್ಷಗಳಲ್ಲಿ ಬೆಂಗಳೂರಿನ ಕಡೆಗೆ ಬರಬೇಕಾಗುತ್ತದೆ. ಫಾರೆಸ್ಟ್ ಒಳಗಡೆ ನಾಟಾಗಳನ್ನು ಕತ್ತರಿಸಿ ಅವನ್ನು ಹೊರಗೆ ತರುವಾಗ ಅಲ್ಲಿ ಆಗತಕ್ಕ waste ನೋಡಿದರೆ, ಒಂದು ಕೋಟಿ ರೂಪಾಯಿ waste ಇರಬಹುದೋ ಏನೋ ? ದೊಡ್ಡ ಮರ ಕಡಿಯುತ್ತಾರೆ. ಮಧ್ಯದ ತುಂಡನ್ನು ತೆಗೆದುಕೊಳ್ಳುತ್ತಾರೆ. ಬಾಕಿಯೆಲ್ಲಾ ಅಲ್ಲಿಯೇ ಬಿದ್ದಿರುತ್ತದೆ. ಆ ರೀತಿ ಒಂದು ಪರ್ವತ ಬಿದ್ದ ಹಾಗೆ ಬಿದ್ದಿರುತ್ತದೆ. ಅದನ್ನು ಯಾವ ರೀತಿ ಉಪಯೋಗ ಮಾಡುವುದಕ್ಕೂ ಕೂಡ ಫಾರೆಸ್ಟ್ ಇಲಾಖೆಯವರು ಯೋಚನೆಮಾಡಿಲ್ಲ ಮತ್ತು ವ್ಯವಸ್ಥೆ ಮಾಡಿಲ್ಲ. ಆನೆಗಳ ಮುಖಾಂತರ, ಜನಗಳ ಸಹಾಯದಿಂದ ಕೆಲವು ತುಂಡುಗಳನ್ನು ಹೊರಗೆ ತರುತ್ತಾರೆ. ಬಾಕಿ ಎಲ್ಲಾ ಅಲ್ಲಿಯೇ waste ಆಗುತ್ತದೆ. 10—15 ದಿವಸಗಳು ಅಲ್ಲಿಯೇ ಇದ್ದು ಕಾಡುಗಿಚ್ಚು ಬಿದ್ದಾಗ ಅದು ಅಷ್ಟು ಬೂದಿಯಾಗುತ್ತದೆ ಎಂಬುದನ್ನು ತಾವು ನೋಡಿರಬಹುದು. ಅನೇಕ ಕಡೆ ಪರ್ವತೋಪಾದಿಯಲ್ಲಿ waste ಬಿದ್ದಿರತಕ್ಕದ್ದನ್ನು ಯಾರು ಬೇಕಾದರೂ ನೋಡಬಹುದು. ಅದು ಸರ್ಕಾರದ ಲೆಖ್ಖಕ್ಕೆ ಸೇರುವುದಿಲ್ಲ. ಈ ರೀತಿ ಮಧ್ಯ ಬಹಳ waste ಆಗುತ್ತಿದೆ. ಮರವನ್ನು ಕಡಿದು ಅದರ ಬುಡದಲ್ಲಿ ತೊಗಟೆ ತೆಗೆದು clean ಮಾಡಿ ಬಿಟ್ಟರೆ ಮೊಳಕೆ ಬಂದು ನಾಲ್ಕಾರು ಸಸಿಗಳಾಗಿ ಬಿಡುತ್ತವೆ. ಈ ಕೆಲಸವನ್ನು ಇವೊತ್ತು ಯಾರೂ ಮಾಡುತ್ತಾ ಇಲ್ಲ. ಒಂದು ವೇಳೆ ಅಂತಹ ಮರಗಳನ್ನು ಬೆಳಸಿದರೂ ಆ ಕಾಡುಗಿಚ್ಚನ್ನು ತಡೆಗಟ್ಟುವುದಕ್ಕೆ ಯಾವ ಕ್ರಮವೂ ಇಲ್ಲದೇ ಇರುವುದರಿಂದ, ಆ ಸಸಿಗಳು ಸೊಪ್ಪುಸದೆ ಇವುಗಳ ಜೊತೆಗೆ ಸುಟ್ಟು ಹೋಗಿ ಬೇರೆ ಮರ ಬೆಳೆಯುವುದಕ್ಕಾಗುವುದಿಲ್ಲ.

ಈ ರೀತಿ ನಾವು ಯೋಚನೆ ಮಾಡಿ ನೋಡಿದರೆ, ಈ ಹೊತ್ತು ಟಿಂಬರ್‌ನ ರೇಟು ಬಹಳ ಹೆಚ್ಚಾಗಿದೆ. ನುಮಾರು 1937ನೆಯ ಇಸವಿಯನ್ನು ಹೋಲಿಕೆಗೆ ತೆಗೆದುಕೊಂಡರೆ, ನುಮಾರು ಇಪ್ಪತ್ತು ವರ್ಷದಿಂದೀಚೆಗೆ ಒಂದಕ್ಕೆ ಹತ್ತರಷ್ಟು ಬೆಲೆಯಾಗಿದೆಯೆಂದು ಹೇಳಬಹುದು. ಆಗ ಮೂರಾಣೆ ನಾಲ್ಕಾಣೆ ಇದ್ದುದು ಈ ಹೊತ್ತು ಮೂರು ರೂಪಾಯಿ, ನಾಲ್ಕು ರೂಪಾಯಿ ಆಗಿದೆ.

ಶ್ರೀ ಎ. ಭೀಮಪ್ಪನಾಯಕ್ (ಮೊಳಕಾಲ್ಮೂರು).—ಅಂದರೆ, ಹದಿನಾರರಷ್ಟಾಯಿತು !

ಶ್ರೀ ಎಸ್. ಗೋಪಾಲಗೌಡ.—ಸಾಮಾನ್ಯವಾಗಿ ಹೇಳಿದೆ, ಅಷ್ಟೆ. ತೇಗ ಮುಂತಾದ ಮರಗಳಿಗೆ ಇನ್ನೂ ಹೆಚ್ಚಾಗಿದೆ. ಆದರೆ ಬಡ್ಜೆಟ್ಟಿನಲ್ಲಿ ಈ ಬಾಬನ್ನು ನೋಡಿದರೆ, ವರಮಾನದಲ್ಲಿ ಒಂದಕ್ಕೆ ಹತ್ತರಷ್ಟು ಹೆಚ್ಚಿಲ್ಲವೆಂದು ಕಂಡುಬರುತ್ತದೆ. ನಾಲ್ಕೈದು ವರ್ಷದ ಖರ್ಚು, ಮತ್ತು ವರಮಾನವನ್ನು ಪರಿಶೀಲನೆ ಮಾಡಿದರೂ ಕೂಡ, 1954-55 ರಲ್ಲಿ ಫಾರೆಸ್ಟ್ ಇಲಾಖೆಯ ಆದಾಯ 125·17, ಅಂದಾಜು ಮಾಡಿರುವ ಪ್ರಕಾರ 108·67 ಲಕ್ಷ ಎಂದು ಹೇಳಿದ್ದಾರೆ. ವರಮಾನದಲ್ಲಿ ಖೋತಾ ಆಗಿದೆ. ಅವರು ಹೇಳಿದಂತೆ ಗಂಧದ ಮರದಿಂದ ಬಹಳ ಆದಾಯ ಪಡೆಯುತ್ತಿದ್ದೇವೆ, ಬಹಳ ಮುತುವರ್ಜಿಯಿಂದ ಕೆಲಸ ಮಾಡುತ್ತಿದ್ದೇವೆ. ಇದಕ್ಕೆ ಹೆಚ್ಚು